

ಕಲಾಕೃತಿಯಲ್ಲಿ ಒಡಮೂಡಿರುವ ನ್ಯೂಪೋರ್ಟ್ ಮ್ಯಾನ್ಷನ್ ವೈಭವ



ಉಚ್ಛ್ರಾಯದಲ್ಲಿತ್ತು. ರೋಡ್ ಐಲ್ಯಾಂಡಿನಲ್ಲಿ 1764ರ ವೇಳೆಗಿದ್ದ 30 ಡಿಸ್ಟಿಲ್ಲರಿಗಳಲ್ಲಿ 24 ನ್ಯೂಪೋರ್ಟಿನಲ್ಲೇ ಇದ್ದವು. ಇಲ್ಲಿಂದ 'ರಮ್ ಬ್ಯಾರೆಲ್ಲು'ಗಳನ್ನು ಪಶ್ಚಿಮ ಆಫ್ರಿಕಾಗೆ ಮಾರಾಟ ಮಾಡಿ, ಬದಲಾಗಿ ಅಲ್ಲಿಂದ ಗುಲಾಮರನ್ನು ಸಾಗಿಸುವ ಕಳ್ಳಸಾಗಣೆಯ ದಂಧೆ ನಡೆಯುತ್ತಿತ್ತು. ಈ ಗುಲಾಮರನ್ನು ಕೆರೆಬಿಯನ್ ದೇಶಗಳ ಕಬ್ಬು ಬೆಳೆಗಾರರಿಗೆ ಮತ್ತು ಸಕ್ಕರೆಯ ಉದ್ದಿಮೆದಾರರಿಗೆ ಮಾರಿ ಅಲ್ಲಿಂದ ಸಕ್ಕರೆ ಮತ್ತು ಮೊಲಾಯಿಸಿಸ್ ಪಡೆಯುವ ಬಹು ಲಾಭದಾಯಕ ವಹಿವಾಟು ನಡೆಸುತ್ತಿದ್ದರು. ಇದನ್ನು ತ್ರಿಕೋನ ವಹಿವಾಟು' **(Triangle Trade)** ಎನ್ನುತ್ತಿದ್ದರು.

ತ್ರಿಕೋನ ವಹಿವಾಟಿನ ಕಾರಣದಿಂದಾಗಿ ವಸಾಹುತುಶಾಹಿಗಳು ಬಲು ಬೇಗ ಆರ್ಥಿಕ ಬಲಾಢ್ಯತೆ ಸಾಧಿಸಿದರು. ಗುಲಾಮರನ್ನು ಮಾರುವ ವಹಿವಾಟನ್ನು ನಂತರದಲ್ಲಿ ಅಮೆರಿಕದ ಆಡಳಿತ ನಿಷಿದ್ಧಗೊಳಿಸಿದ್ದರೂ ಕಳ್ಳತನದಲ್ಲಿ ಈ ದಂಧೆ ಎಗ್ಗಿಲ್ಲದೇ ನಡೆಯುತ್ತಿತ್ತು. ಸಾಗಣೆ ಮಾರ್ಗದಲ್ಲಿ ಗುಲಾಮರು ಸತ್ತರೆ ಅವರನ್ನು ಇದೇ ನ್ಯೂಪೋರ್ಟಿನ ಸಾರ್ವಜನಿಕ ರುದ್ರಭೂಮಿಯಲ್ಲಿ ಹೂಳಲಾಗುತ್ತಿತ್ತು.

ಬ್ರೇಕರ್ಸ್‌ನ ಅಂಗಳದ ಗೇಟಿನೊಳಗೆ ಪ್ರವೇಶಿಸುತ್ತಲೇ ಎಡ ಅಂಗಳದಲ್ಲಿ ಟಿಕೆಟ್ ಕೌಂಟರಿನೊಳಗೆ ಪ್ರವೇಶಿಸಿದರೆ ಅದೇ ಒಂದು ದೊಡ್ಡ ಹಾಲ್. ಅದರಲ್ಲಿ ಒಂದು ಕ್ಯಾಂಟೀನ್ ಮತ್ತು ಪ್ರತ್ಯೇಕ ರೆಸ್ಟ್‌ರೂಮುಗಳಿವೆ. ಟಿಕೆಟ್ ಆಕಾಂಕ್ಷಿಗಳ ದೊಡ್ಡ ಸಾಲೂ ಅಲ್ಲಿ ಕಾಣಿಸುತ್ತದೆ. ಹೊರಗಿನಿಂದ ಇವೆಲ್ಲವೂ ಕಾಣುವುದಿಲ್ಲ. ಕ್ಯೂನಲ್ಲಿ ನಿಂತು ಟಿಕೆಟ್ ಕೊಂಡಿದ್ದಾಯಿತು. ಸರಿ, ಸುಮಾರು ನಾನೂರು ಅಡಿ ಅಂಗಳದಲ್ಲಿ ನಡೆದು ಮ್ಯಾನ್ಷನ್‌ನತ್ತ ಹೊರಟೆವು.

## ಇಲ್ಲಿ ಎಲ್ಲವೂ ಅದ್ದೂರಿ

ಬ್ರೇಕರ್ಸ್ ಮ್ಯಾನ್ಷನ್‌ನಲ್ಲಿ ಒಳ ಪ್ರವೇಶಿಸುತ್ತಲೇ ಸ್ವಾಗತ ಕೌಂಟರು ಇದೆ. ಅಲ್ಲಿ ಪ್ರತಿಯೊಬ್ಬರಿಗೂ ಆಡಿಯೋ ಟೂರ್ ಸಲುವಾಗಿ ಇಯರ್ ಫೋನ್ ಮತ್ತಿತರ ಸಲಕರಣೆ ನೀಡುತ್ತಾರೆ. ಅದನ್ನು ಕಿವಿಯಲ್ಲಿ ಹಾಕಿಕೊಂಡರೆ ಹೆಣ್ಣು ದನಿಯೊಂದು ಉಲಿಯುತ್ತ ಪ್ರತಿಯೊಂದು ಕೋಣೆಯ ಇತಿಹಾಸ, ವಿವರ ನೀಡುತ್ತದೆ. ಒಳಗಿನ ಅದ್ದೂರಿ ಜೀವನಶೈಲಿ, ಅಲ್ಲಿನ ಪರಿಕರಗಳ ಭವ್ಯತೆ ನೋಡಿ ಬೆರಗು ಮೂಡುತ್ತದೆ. ಮುಖ್ಯ ಹಜಾರದ ಎತ್ತರ 45 ಅಡಿಗಳು. ವಿಶಾಲವಾದ ಹಜಾರಗಳು, ಕೋಣೆಗಳು ವೈಭವಯುತವಾಗಿ ಸಜ್ಜುಗೊಂಡಿದ್ದು ನಮ್ಮ ಮಹಾರಾಜರ ಅರಮನೆಗಳಿಗೇನೂ ಕಡಿಮೆ ಇಲ್ಲದಂತಿವೆ. ಮೂರು ಅಂತಸ್ತುಗಳಲ್ಲಿನ ಎಪ್ಪತ್ತು ಕೋಣೆಗಳಲ್ಲಿ ಸುತ್ತುತ್ತಿದ್ದಂತೆ ಅಂದಿನ ಕಾಲದ ಐಷಾರಾಮಿ ಜೀವನದ ಝಲಕು ನಮ್ಮ ಮುಂದೆ ತೆರೆದುಕೊಳ್ಳುತ್ತ ಸಾಗುತ್ತದೆ.

1884ರಲ್ಲಿ ಬೆಂಕಿಗೆ ಆಹುತಿಯಾಗಿದ್ದ ಈ ಕಟ್ಟಡವನ್ನು ವಾಂಡರ್‌ಬಿಲ್ಟ್‌ನ ಮೊಮ್ಮಗ ಎರಡನೇ ವಾಂಡರ್‌ಬಿಲ್ಟ್ ಎಂಬಾತ 1885ರಲ್ಲಿ ಇದನ್ನು ಕೊಂಡು, ಮರು ನಿರ್ಮಾಣಕ್ಕಾಗಿ ಖ್ಯಾತ ಆರ್ಕಿಟೆಕ್ಟ್ ರಿಚರ್ಡ್ ಮೊರಿಸ್ ಹಂಟನಿಗೆ ವಹಿಸಿದ್ದ. ಈತ ಪ್ಯಾರಿಸ್, ಇಟಲಿಗಳಿಂದ ತರಿಸಿದ ರತ್ನಗಂಬಳಿ, ಪೀಠೋಪಕರಣಗಳು, ಝೂಮರುಗಳು, ನೆಲಹಾಸು ಮುಂತಾದವುಗಳಿಂದ ಭವನವನ್ನು ಅಲಂಕೃತಗೊಳಿಸಿದ. ಭವನದ ಎಲ್ಲೆಡೆಯೂ ಅಪ್ರತಿಮ ವೈಭವದ ವಿರಾಟ್ ದರ್ಶನವಿದೆ. ಇವನ್ನೆಲ್ಲಾ ನೋಡುವುದೇ ಒಂದು ಸೊಗಸು.

ಅಲ್ಲಿ ಎಲ್ಲವೂ ಅದ್ದೂರಿ. ಬಹುವಿಶಾಲವಾದ ಹಜಾರಗಳು, ಬೆಡ್ ರೂಮುಗಳು, ಇಸ್ಪೀಟ್ ಆಟದ ಕೋಣೆ. ಬಿಲಿಯರ್ಡ್ಸ್ ಕೋಣೆ, ಉಡುಗೆ ತೊಡುಗೆಯ ವೈಯಕ್ತಿಕ ಕೋಣೆಗಳು, ಮ್ಯೂಸಿಕ್ ರೂಮುಗಳು, ಸಮುದ್ರಕ್ಕೆ ಮುಖಮಾಡಿದ ಪ್ರಶಾಂತ ಕೊಠಡಿಗಳು, ಸಂಗ್ರಹಾಲಯ, ಮೀಟಿಂಗ್ ಹಾಲುಗಳು, ಬಾರ್ ರೂಮುಗಳು, ಲೈಬ್ರರಿ, ದೊಡ್ಡ ದೊಡ್ಡ ವಾಲ್ ಪೇಂಟಿಂಗ್‌ಗಳು, ಫೈರ್ ಚೇಂಬರುಗಳು, ಒಳಮಾಡಿನ ಕೆತ್ತನೆಗಳು, ಬಣ್ಣಗಳು, ಪೇಂಟಿಂಗ್‌ಗಳು, ಮಾರ್ಬಲ್ ಪೇಂಟಿಂಗ್ ನೆಲಹಾಸುಗಳು, ಅಲಂಕೃತ ಕಂಬಗಳು, ಚಿತ್ತವನ್ನು ಸೂರೆಗೊಳ್ಳುವ ಕನ್ಯೆಯರ ಶಿಲ್ಪಗಳು, ವಾಹ್ ಎಂದೆನ್ನಿಸುವ ಉತ್ಕೃಷ್ಟ ಝೂಮರುಗಳು, ಮಕಮಲ್ಲಿನ ಹಾಸುಗಳು, ಹಜಾರದಲ್ಲಿನ ರತ್ನಗಂಬಳಿಗಳಿಂದ ಸಜ್ಜುಗೊಂಡ ಕೋಣೆಗಳನ್ನು ನೋಡಿ ಕಣ್ಣು ಸೋಲುತ್ತವೆ.

ಪ್ರತಿಯೊಂದು ರೂಮಿನಲ್ಲಿರುವ ಫೈರ್ ಚೇಂಬರ್ ಕೂಡ ಒಂದೊಂದು ವಿಶಿಷ್ಟ ವಿನ್ಯಾಸದ ಕಲಾಕೃತಿಯಾಗಿದೆ. ಅತಿಥಿ ಕೋಣೆಗಳಲ್ಲದೆ ಶೆಫ್, ಚೀಫ್ ಮ್ಯಾನೇಜರ್ ಇನ್ನಿತರೆ ಸಹಾಯಕ ಸಿಬ್ಬಂದಿಗೆಂದು 30 ಕೋಣೆಗಳಿವೆ. ವಾಂಡರ್‌ಬಿಲ್ಟ್ ಒಡೆತನದ ನ್ಯೂಯಾರ್ಕಿನ ಸೆಂಟ್ರಲ್ ರೇಲ್ ರೋಡಿನ ಮೂಲ ಪ್ರತಿಕೃತಿಯೂ ಮನ ಸೆಳೆಯುತ್ತದೆ

ಭವನದ ಮುಂದೆ ವಿಶಾಲ ಅಂಗಳದಾಚೆಗೆ ಅಟ್ಲಾಂಟಿಕ್ ಸಾಗರದವರೆಗೂ ಚಾಚಿದ ಸುಂದರವಾದ ಹಸಿರು ಲಾನ್ ಭವನಕ್ಕೆ ರಮ್ಯತೆಯ ಮೆರುಗನ್ನು ತಂದುಕೊಟ್ಟಿದೆ. ■